**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ವೈ.ಎ. ನಾರಾಯಣಸ್ವಾಮಿ, ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಹೇಳಿಕೆ**

---

**ವಿಷಯ:**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ಮೂಲ ಉದ್ದೇಶಗಳನ್ನು ಹಾಗೂ ಕಾರ್ಯ ಯೋಜನೆಗಳನ್ನು ಬದಿಗಿಟ್ಟು ಅವ್ಯವಹಾರದ ಹಾಗೂ ಭ್ರಷ್ಟಾಚಾರದ ಕೂಪವಾಗಿ ಪರಿವರ್ತನೆಯಾಗಿದ್ದು, ಇತ್ತೀಚಿನ ದಿನಗಳಲ್ಲಿ ಸದರಿ ಪ್ರಾಧಿಕಾರವು ಬ್ರೋಕರ್‌ಗಳ ಸ್ವತ್ತಾಗಿ ಮಾರ್ಪಟ್ಟಿರುವುದರಿಂದ, ಇದನ್ನು ಬರ್ಕಾಸ್ತ್ ಮಾಡುವ ಬಗ್ಗೆ.

**ಉತ್ತರ:**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕ ಆಕ್ಟ್ ನಂ. 12/1976 ರ ಮೂಲಕ ದಿನಾಂಕ: 20.12.1975 ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಇದರ ಮೂಲ ಉದ್ದೇಶವು ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಪಡಿಸುವುದು ಆಗಿರುತ್ತದೆ. ಬಿಡಿಎ ಕಾಯ್ದೆ, ಸೆಕ್ಷನ್-14 ರ ಪ್ರಕಾರ ಈ ಉದ್ದೇಶಕ್ಕಾಗಿ ಪ್ರಾಧಿಕಾರವು ಸ್ಥಿರ ಮತ್ತು ಚರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು, ಉಳಿಸಿಕೊಳ್ಳಲು, ನಿರ್ವಹಿಸಲು ಹಾಗೂ ವಿಲೇವಾರಿ ಮಾಡಲು ಅಧಿಕಾರ ಹೊಂದಿರುತ್ತದೆ. ಜೊತೆಗೆ ಕಟ್ಟಡಗಳನ್ನು ಹಾಗೂ ಇತರೆ ತಾಂತ್ರಿಕ ಕೆಲಸಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿಪಡಿಸಲು ಬೇಕಾಗುವ ಎಲ್ಲಾ ಅಂಶಗಳನ್ನು ಕೈಗೆತ್ತಿಕೊಳ್ಳಲು ಸಹ ಉದ್ದೇಶವಿರುತ್ತದೆ.

ಈ ನಿಟ್ಟಿನಲ್ಲಿ ಪ್ರಾಧಿಕಾರವು ಬಡಾವಣೆಗಳನ್ನು ರಚಿಸಿ (ಇತ್ತೀಚಿನ ನಾಡಪ್ರಭು ಕೆಂಪೇಗೌಡ ಬಡಾವಣೆ ಮತ್ತು ಡಾ|| ಕೆ. ಶಿವರಾಮಕಾರಂತ ಬಡಾವಣೆ ಹಾಗೂ ಇತರೆ) ನಾಗರೀಕರಿಗೆ ನಿವೇಶನಗಳನ್ನು ಹಂಚುವುದು ವಸತಿ ಯೋಜನೆಯನ್ನು ರೂಪಿಸಿ ಫ್ಲಾಟ್ ಮತ್ತು ವಿಲ್ಲಾಗಳನ್ನು ನಿರ್ಮಿಸಿ ಹಂಚುವುದು, ಮಾರುಕಟ್ಟೆ ಸಂಕೀರ್ಣಗಳನ್ನು ನಿರ್ಮಿಸುವುದು ಹಾಗೂ ಅಬಿವೃದ್ಧಿಪಡಿಸುವುದು, ಕೆರೆಗಳ ಪುನಶ್ಚೇತನ ಮತ್ತು ಅಭಿವೃದ್ಧಿಪಡಿಸುವುದು, ರಿಂಗ್ ರಸ್ತೆ ನಿರ್ಮಾಣ (ಹೊರವರ್ತುಲ ರಸ್ತೆ ಹಾಗೂ ಫೆರಿಫೆರಲ್ ವರ್ತುಲ ರಸ್ತೆ), ಖಾಸಗಿ ಬಡಾವಣೆಗಳ ನಿರ್ಮಾಣಕ್ಕಾಗಿ ನಗರ ಯೋಜನೆ ತತ್ವಗಳಂತೆ ಪರಿಶೀಲಿಸಿ ಅನುಮೋದನೆ ನೀಡುವುದು, ಕಾಲಕಾಲಕ್ಕೆ ಮಾಸ್ಟರ್ ಪ್ಲಾನ್‌ಗಳನ್ನು ತಯಾರಿಸುವುದು ಮುಂತಾದ ಯೋಜನೆಗಳನ್ನು ನಿರ್ವಹಿಸುತ್ತಿದೆ.

ಈ ಮೇಲಿನ ಎಲ್ಲಾ ಉದ್ದೇಶಗಳನ್ನು ನಿರಂತರವಾಗಿ ನಿರ್ವಹಿಸುತ್ತಿರುವುದರಿಂದ ಪ್ರಾಧಿಕಾರವು ತನ್ನ ಮೂಲ ಉದ್ದೇಶವನ್ನು ಈಡೇರಿಸುತ್ತಲಿದೆ.

**ಸಂಖ್ಯೆ:** ನಅಇ 283 ಬೆಅಂಸೇ 2021(ಇ)

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ